## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಆರ್.ಬಿ.ತಿಮ್ಮಾಪುರ ಇವರು ನಿಯಮ 72ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಸರ್ಕಾರದ ಉತ್ತರ

**ವಿಷಯ :**

ಬಾಗಲಕೋಟೆ ಜಿಲ್ಲೆ, ಮುಧೋಳ್ ತಾಲ್ಲೂಕಿನ ರನ್ನ ರೈತರ ಸಕ್ಕರೆ ಕಾರ್ಖಾನೆಯನ್ನು ರೂ.320 ಕೋಟಿಗಳಿಗೆ ಸರ್ಕಾರ 40 ವರ್ಷಗಳ ಗುತ್ತಿಗೆಗೆ ನೀಡಿದ್ದು, ಗುತ್ತಿಗೆ ಪಡೆದಂಥ ಕಂಪನಿಯ ಹಿನ್ನೆಲೆ ಹಾಗೂ ಕಬ್ಬು ಕಾರ್ಖಾನೆ ಮತ್ತು ರೈತರ ಸಮನ್ವಯತೆ ವಿಚಾರದಲ್ಲಿ ಹೊಂದಿರುವ ಅನುಭವಗಳನ್ನು ಹಾಗೂ ಮಾನದಂಡವನ್ನು ಪರಿಶೀಲಿಸದೇ ಯಾವುದೇ ಮಾನದಂಡಗಳನ್ನು ಅನುಸರಿಸದೇ ಸರ್ಕಾರ ಈ ಕಂಪನಿಗೆ ಗುತ್ತಿಗೆ ನೀಡಿದ್ದು, ಸುಮಾರು ರೂ.500.00 ಕೋಟಿಗೂ ಹೆಚ್ಚು ಆಸ್ತಿಯನ್ನು ಹೊಂದಿರುವ ರನ್ನ ರೈತರ ಸಕ್ಕರೆ ಕಾರ್ಖಾನೆಗೆ ಯಾವುದೇ ಭಾದಕವಾಗುವುದಿಲ್ಲವೇ ಎನ್ನುವ ವಿಷಯದ ಬಗ್ಗೆ ನಿಯಮ 72ರಡಿಯಲ್ಲಿ ಮಾನ್ಯ ಕೈಮಗ್ಗ ಜವಳಿ ಹಾಗು ಸಕ್ಕರೆ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಸರ್ಕಾರದ ಉತ್ತರ:**

ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ – ಈ ಕಾರ್ಖಾನೆಯನ್ನು 1981-82ನೇ ಸಾಲಿನಲ್ಲಿ ಸಹಕಾರ ವಲಯದಲ್ಲಿ ನೋಂದಣಿಯಾಗಿರುತ್ತದೆ. ಈ ಕಾರ್ಖಾನೆಯ ಸ್ಥಾಪನೆಗಾಗಿ ಸರ್ಕಾರದಿಂದ 200 ಎಕರೆ ಜಮೀನು ಮಂಜೂರು ಮಾಡಲಾಗಿದೆ. ಕಾರ್ಖಾನೆಯು ಪ್ರಾಯೋಗಿಕ ಹಂಗಾಮನ್ನು 2500 ಟಿಸಿಡಿಯೊಂದಿಗೆ 1999 ರಲ್ಲಿ ಪ್ರಾರಂಭಿಸಿರುತ್ತದೆ. 2012-13ನೇ ಸಾಲಿನಲ್ಲಿ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯವನ್ನು 2500 ಟಿಸಿಡಿಯಿಂದ 5000 ಟಿಸಿಡಿಗೆ ವಿಸ್ತರಿಸಲಾಗಿದೆ ಹಾಗೂ ಈ ಕಾರ್ಖಾನೆಯು 13 ಮೆ.ವ್ಯಾಟ್ ಸಾಮರ್ಥ್ಯದ ಸಹ-ವಿದ್ಯುತ್ ಘಟಕವನ್ನು ಹೊಂದಿರುತ್ತದೆ.

ದಿನಾಂಕ:31.8.2021ರ ಅಂತ್ಯಕ್ಕೆ ಇದ್ದಂತೆ ಕಾರ್ಖಾನೆಯಿಂದ ವಿವಿಧ ಹಣಕಾಸು ಸಂಸ್ಥೆಗಳಿಗೆ ಪಾವತಿಸಬೇಕಾದ ಸಾಲ ಮತ್ತು ಜವಾಬ್ದಾರಿಗಳ ವಿವರ ಈ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

| ಕ್ರಸಂ. | ಹಣಕಾಸು ಸಂಸ್ಥೆಗಳ ಹೆಸರು | ಅಸಲು ಮೊತ್ತ | ಬಡ್ಡಿ ಮೊತ್ತ | ಒಟ್ಟು ಮೊತ್ತ |
|---|---|---|---|---|
| 1 | ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಬೆಂಗಳೂರು | 76.89 | 15.29 | 92.18 |
| 2 | ಬಿ.ಡಿ.ಸಿ.ಸಿ. ಬ್ಯಾಂಕ್, ಬಾಗಲಕೋಟೆ | 79.06 | 15.62 | 94.68 |
| 3 | ಹುಡ್ಕೋ ಬ್ಯಾಂಕ್, ಬೆಂಗಳೂರು | 3.08 | 2.65 | 5.73 |
| 4 | ಬ್ಯಾಂಕ್ ಆಫ್ ಇಂಡಿಯ, ಮುಧೋಳ (ಕಾರ್ಮಿಕರು ಮತ್ತು ರೈತರ ಮೇಲೆ ಹೆಚ್ & ಟಿ ಮತ್ತು ಬೆಳೆ ಸಾಲ) | 50.10 | 16.76 | 66.86 |
| 5 | ರಾಜ್ಯ ಸರ್ಕಾರದ ಸಾಲ (ಕಬ್ಬು ಖರೀದಿ ತೆರಿಗೆ ಪರಿವರ್ತಿತ ಬಡ್ಡಿ ರಹಿತ ಸಾಲ) | 16.83 | – | 16.83 |
| 6 | ಸರ್ಕಾರದ ಮೃದು ಸಾಲ | 4.00 | – | 4.00 |
| 7 | ಇತರೆ ಜವಾಬ್ದಾರಿಗಳು | 56.54 | – | 56.54 |
| | **ಒಟ್ಟು ಮೊತ್ತ** | **286.50** | **50.32** | **336.82** |

ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ – ಈ ಕಾರ್ಖಾನೆಯನ್ನು 2020-21ನೇ ಹಂಗಾಮಿನಿಂದ ಖಾಸಗಿಯವರಿಗೆ ಗುತ್ತಿಗೆ ನೀಡಲು ದಿನಾಂಕ:17.08.2020ರಂದು ಜರುಗಿದ ಕಾರ್ಖಾನೆಯ ಸರ್ವ ಸದಸ್ಯರ ವಿಶೇಷ ಸಾಮಾನ್ಯ ಸಭೆಯಲ್ಲಿ ಅನುಮೋದನೆಯನ್ನು ನೀಡಲಾಗಿದೆ. ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕಾರ್ಖಾನೆಯನ್ನು 2020-21ನೇ ಹಂಗಾಮಿನಿಂದ 40 ವರ್ಷಗಳ ಅವಧಿಗೆ

...2

Lease Rehalitiate Operate Transfer (ಎಲ್.ಆರ್.ಓ.ಟಿ) ಆಧಾರದ ಮೇಲೆ ಇದ್ದಲ್ಲಿ ಇದ್ದಂತೆಯೇ ಖಾಸಗಿಯವರಿಗೆ ಗುತ್ತಿಗೆ ನೀಡಲು ದಿನಾಂಕ:22.10.2020ರಂದು ಜರುಗಿದ ಸಚಿವ ಸಂಪುಟ ಸಭೆಯು ಅನುಮೋದನೆಯನ್ನು ನೀಡಿರುತ್ತದೆ. ಅದರಂತೆ ಸರ್ಕಾರದ ಆದೇಶ ಸಂಖ್ಯೆ ಸಿಐ 214 ಸಿಓಎಫ್ 2020, ದಿನಾಂಕ: 27.10.2020ರಲ್ಲಿ ಅನುಮತಿ ನೀಡಲಾಗಿದೆ.

ಟೆಂಡರ್ ಪ್ರಕ್ರಿಯೆಗಳನ್ನು ನಡೆಸಲು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಪ್ರಿಬಿಡ್ ಸಭೆ, ತಾಂತ್ರಿಕ ಪರಿಶೀಲನಾ ಸಮಿತಿ ಮತ್ತು ಆರ್ಥಿಕ ಪರಿಶೀಲನಾ ಸಮಿತಿಗಳನ್ನು ರಚಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:06.11.2020ರಲ್ಲಿ ಆದೇಶಿಸಲಾಗಿರುತ್ತದೆ.

ಟೆಂಡರ್ ಅಧಿಸೂಚನೆಯಲ್ಲಿ ಪ್ರಕಟಿಸಿದಂತೆ ದಿನಾಂಕ:20.11.2020 ರಂದು ತಾಂತ್ರಿಕ ಬಿಡ್ಡುಗಳನ್ನು ತೆರೆಯಲಾಯಿತು. ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿದ ಕಾಲಮಿತಿಯಲ್ಲಿ ಮೆ॥ ನಿರಾಣಿ ಶುಗರ್ಸ್, ಮುಧೋಳ ಇವರು ಮಾತ್ರ ಬಿಡ್ ಸಲ್ಲಿಸಿದ್ದರು. ಮೆ॥ ನಿರಾಣಿ ಶುಗರ್ಸ್, ಮುಧೋಳ ಇವರು ಸಲ್ಲಿಸಿದ ಬಿಡ್ಡನ್ನು ಅರ್ಹವೆಂದು ತಾಂತ್ರಿಕ ಸಮಿತಿಯಲ್ಲಿ ಪರಿಗಣಿಸಲಾಗಿರುತ್ತದೆ. ದಿನಾಂಕ:21.11.2020 ರಂದು ಆರ್ಥಿಕ ಬಿಡ್ಡುಗಳನ್ನು ತೆರೆಯಲಾಗಿ, ಮೆ॥ನಿರಾಣಿ ಶುಗರ್ಸ್ ಇವರು 40 ವರ್ಷಗಳ ಅವಧಿಗೆ ರೂ.315.00 ಕೋಟಿಗಳ ಬಿಡ್ ಮೊತ್ತವನ್ನು ಸಲ್ಲಿಸಿದ್ದು, ಇದರ ಪ್ರಸ್ತುತ ನಿವ್ವಳ ಮೌಲ್ಯದ (Net Present Value)(ಎನ್.ಪಿ.ವಿ) ಮೊತ್ತ ರೂ.82.70 ಕೋಟಿಗಳಾಗಿರುತ್ತದೆ. ಸದರಿ ಆರ್ಥಿಕ ಬಿಡ್ಡನ್ನು ಅನುಮೋದನೆಗಾಗಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ದಿನಾಂಕ: 24.11.2020 ರಂದು ಸರ್ಕಾರಕ್ಕೆ ಸಲ್ಲಿಸಿದ್ದರು.

ಏತನ್ಮಧ್ಯೆ ಕಾರ್ಖಾನೆಯವರು ಮನವಿ ಪತ್ರವೊಂದನ್ನು ಸಲ್ಲಿಸಿ, ಪ್ರಸ್ತುತ ಕಾರ್ಖಾನೆ ಹೊಂದಿರುವ ಜವಾಬ್ದಾರಿಗಳನ್ನು ವಿಲೇ ಮಾಡಲು 10 ವರ್ಷಗಳಲ್ಲಿ ರೂ.489.79 ಕೋಟಿಗಳು ಅಗತ್ಯವಿರುವುದರಿಂದ ಪ್ರಸ್ತುತ ಬಿಡ್ಡುದಾರರು ಪ್ರಸ್ತಾಪಿಸಿರುವ ಮೊತ್ತದಿಂದ ಕಾರ್ಖಾನೆಯ ಸಾಲ ಮತ್ತು ಜವಾಬ್ದಾರಿಗಳನ್ನು ಮರುಪಾವತಿಸುವುದು ಕಷ್ಟಸಾಧ್ಯವೆಂದು ತಿಳಿಸುತ್ತಾ, ಸದರಿ ಗುತ್ತಿಗೆ ಮೊತ್ತವನ್ನು ಮರುಪರಿಶೀಲಿಸುವಂತೆ ಕೋರಿದ್ದರು.

ಆದ್ದರಿಂದ, ಏಕವ್ಯಕ್ತಿ ಬಿಡ್ಡುದಾರರಾದ ಮೆ॥ನಿರಾಣಿ ಶುಗರ್ಸ್ ಇವರೊಂದಿಗೆ ಸೂಕ್ತ ದರ ಸಂಧಾನ ನಡೆಸಿ, ಸರ್ಕಾರಕ್ಕೆ ಮರು ಪ್ರಸ್ತಾವನೆ ಸಲ್ಲಿಸುವಂತೆ ಸರ್ಕಾರದ ಪತ್ರ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:08.12.2020 ರ ಪತ್ರದಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ತಿಳಿಸಲಾಗಿತ್ತು.

ಏಕವ್ಯಕ್ತಿ ಬಿಡ್ಡುದಾರರಾದ ಮೆ॥ನಿರಾಣಿ ಶುಗರ್ಸ್ ಮತ್ತು ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯ ಪ್ರತಿನಿಧಿಗಳೊಂದಿಗೆ ದಿನಾಂಕ:15.12.2020 ರಂದು ದರ ಸಂಧಾನ ಸಭೆ ನಡೆಸಲಾಗಿದೆ. ಬಿಡ್ಡುದಾರರು ಗುತ್ತಿಗೆ ಮೊತ್ತವನ್ನು ರೂ.345.00 ಕೋಟಿಗಳಿಗೆ ಹೆಚ್ಚಿಸಿ ಒಪ್ಪಿಗೆ ಪತ್ರ ನೀಡಿದ್ದು, ಇದರ ಪ್ರಸ್ತುತ ನಿವ್ವಳ ಮೌಲ್ಯ (Net Present Value)(ಎನ್.ಪಿ.ವಿ) ರೂ.85.70ಕೋಟಿಗಳಾಗಿರುತ್ತದೆ.

ಸದರಿ ದರ ಸಂಧಾನ ಸಭೆಗೆ ಕಾರ್ಖಾನೆಗೆ ಸಾಲ ನೀಡಿರುವ ಅಪೆಕ್ಸ್ ಬ್ಯಾಂಕ್, ಡಿ.ಸಿ.ಸಿ. ಬ್ಯಾಂಕ್ ಬಾಗಲಕೋಟೆ, ಬ್ಯಾಂಕ್ ಆಫ್ ಇಂಡಿಯಾ ಮತ್ತು ಹುಡ್ಕೋ ಇವುಗಳ ಪ್ರತಿನಿಧಿಗಳನ್ನು ಸಹ ಆಹ್ವಾನಿಸಿ, ಅಭಿಪ್ರಾಯವನ್ನು ಪಡೆಯಲಾಗಿರುತ್ತದೆ. ಹುಡ್ಕೋ ಸಂಸ್ಥೆಯನ್ನು ಹೊರತುಪಡಿಸಿ ಉಳಿದ ಬ್ಯಾಂಕುಗಳು ಸಾಲ ವಸೂಲಾತಿ ಸಂಬಂಧ ಕಾರ್ಖಾನೆಯ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ದಾಖಲಿಸಿದ್ದು, ಸದರಿ ರಿಟ್ ಅರ್ಜಿಗಳು ಇತ್ಯರ್ಥಕ್ಕೆ ಬಾಕಿಯಿರುತ್ತವೆ.

..3

ಬಿಡ್ಡುದಾರರು ನೀಡಿರುವ ಪರಿಷ್ಕೃತ ಬಿಡ್ ಮೊತ್ತ ರೂ.345.00 ಕೋಟಿಗಳಿಂದ ಕಾರ್ಖಾನೆಯ ಸಾಲ ಮತ್ತು ಜವಾಬ್ದಾರಿಗಳನ್ನು ತೀರುವಳಿ ಮಾಡಲು ಸಾಧ್ಯವಾಗದೇ ಇರುವುದರಿಂದ ಪುನ: ದರ ಸಂಧಾನ ನಡೆಸುವಂತೆ ಸರ್ಕಾರದ ಪತ್ರ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:25.05.2021ರಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ತಿಳಿಸಲಾಗಿತ್ತು. ಅದರಂತೆ ದಿನಾಂಕ: 08.07.2021 ಮತ್ತು ದಿನಾಂಕ: 20.07.2021 ರಂದು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಅಧ್ಯಕ್ಷತೆಯಲ್ಲಿ ದರ ಸಂಧಾನ ಸಭೆಗಳನ್ನು ನಡೆಸಲಾಗಿರುತ್ತದೆ. ಆದರೆ, ಸದರಿ ಸಭೆಗಳು ಫಲಪ್ರದವಾಗಿರುವುದಿಲ್ಲ.

ಜನವರಿ 2021ರಿಂದ ಅವಶ್ಯಕ ಸಿಬ್ಬಂದಿಗಳನ್ನು ಹೊರತುಪಡಿಸಿ ಉಳಿದ ಸಿಬ್ಬಂದಿ/ಕಾರ್ಮಿಕರಿಗೆ ಲೇ-ಆಫ್ ಘೋಷಣೆ ಮಾಡಲಾಗಿರುತ್ತದೆ. ಕಾರ್ಖಾನೆಯನ್ನು ಪ್ರಾರಂಭಿಸುವಂತೆ, ಕಾರ್ಮಿಕರ/ಸಿಬ್ಬಂದಿಗಳ ಹಿಂಬಾಕಿಯನ್ನು ಪಾವತಿಸುವಂತೆ ಹಾಗೂ ಇನ್ನಿತರ ಬೇಡಿಕೆಗಳನ್ನು ಇಟ್ಟು ಕಾರ್ಮಿಕರು ಮತ್ತು ರೈತರು ಅನಿರ್ದಿಷ್ಟಾವಧಿ ಧರಣಿ ಕೈಗೊಂಡಿರುತ್ತಾರೆ.

ಕಾರ್ಖಾನೆಯನ್ನು ಮುಂಬರುವ 2021-22ನೇ ಹಂಗಾಮಿನಿಂದ ಪುನರ್ ಪ್ರಾರಂಭಿಸುವುದು ಅನಿವಾರ್ಯವಾಗಿರುವುದರಿಂದ ಪ್ರಸ್ತುತ ನಡೆದಿರುವ ಟೆಂಡರ್ ಪ್ರಕ್ರಿಯೆ ಅಂತಿಮಗೊಳಿಸಲು ಸಾಧ್ಯವಾಗದೇ ಇರುವುದರಿಂದ ಮರು ಟೆಂಡರ್ ಪ್ರಕ್ರಿಯೆ ನಡೆಸಲು ಅನುಮತಿ ನೀಡುವಂತೆ ಸರ್ಕಾರವನ್ನು ಕೋರಲು ದಿನಾಂಕ:07.08.2021 ರಂದು ಕಾರ್ಖಾನೆಯ ಆಡಳಿತ ಮಂಡಳಿಯಲ್ಲಿ ನಿರ್ಣಯವನ್ನು ಕೈಗೊಳ್ಳಲಾಗಿದೆ.

ಏಕವ್ಯಕ್ತಿ ಬಿಡ್ಡುದಾರರಾದ ಮೆ॥ನಿರಾಣಿ ಶುಗರ್ಸ್ ಲಿ., ಮುಧೋಳ ಇವರು ನಮೂದಿಸಿರುವ ಪರಿಷ್ಕೃತ ಗುತ್ತಿಗೆ ಮೊತ್ತ ರೂ.345.00 ಕೋಟಿಗಳಿಂದ ಕಾರ್ಖಾನೆಯ ಸಾಲ ಮತ್ತು ಜವಾಬ್ದಾರಿಗಳನ್ನು ಸಮರ್ಥವಾಗಿ ತೀರುವಳಿ ಮಾಡಲು ಸಾಧ್ಯವಾಗದೇ ಇರುವುದರಿಂದ ಸದರಿ ಬಿಡ್ಡನ್ನು ತಿರಸ್ಕರಿಸಿ, ದಿನಾಂಕ 02.11.2020 ರಂದು ಪ್ರಕಟಿಸಲಾದ ಟೆಂಡರ್ ಅಧಿಸೂಚನೆಯನ್ನು ರದ್ದುಪಡಿಸಲು ಹಾಗೂ ಮರು ಟೆಂಡರ್ ಕರೆಯಲು ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:24.08.2021 ರಲ್ಲಿ ಸರ್ಕಾರದ ಅನುಮತಿಯನ್ನು ನೀಡಲಾಗಿದೆ.

ಮರು ಟೆಂಡರ್ ಅಧಿಸೂಚನೆಯನ್ನು ರಾಜ್ಯ ಮಟ್ಟದಲ್ಲಿ ಪ್ರಸಾರವಾಗುವ **"ಟೈಮ್ಸ್ ಆಫ್ ಇಂಡಿಯಾ ಮತ್ತು ಸಂಯುಕ್ತ ಕರ್ನಾಟಕ ಹಾಗೂ ಇಂಡಿಯನ್ ಎಕ್ಸ್‌ಪ್ರೆಸ್"** ದಿನ ಪತ್ರಿಕೆಗಳಲ್ಲಿ ಹಾಗೂ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿತ್ತು.

ನಿಗದಿತ ವೇಳಾಪಟ್ಟಿಯಂತೆ, ದಿನಾಂಕ:16.9.2021ರಂದು ಪ್ರಿ-ಬಿಡ್ ಸಭೆಯನ್ನು ನಡೆಸಲಾಯಿತು. ಸದರಿ ಸಭೆಯಲ್ಲಿ ಸಮಿತಿಯ ಸದಸ್ಯರು, ಆಸಕ್ತ ಬಿಡ್ಡುದಾರರು ಮತ್ತು ಕಾರ್ಖಾನೆಗೆ ಹಣಕಾಸು ನೆರವು ನೀಡಿರುವ ಬ್ಯಾಂಕುಗಳ ಪ್ರತಿನಿಧಿಗಳು ಭಾಗವಹಿಸಿದರು. ಸದರಿ ಸಭೆಯಲ್ಲಿ ಆಸಕ್ತ ಬಿಡ್ಡುದಾರರು ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ಕೆಲವು ಷರತ್ತುಗಳನ್ನು ಸಡಿಲಗೊಳಿಸುವಂತೆ ಕೋರಿದ್ದರು.

ಕಾರ್ಖಾನೆಯು ವಿವಿಧ ಹಣಕಾಸು ಸಂಸ್ಥೆಗಳಿಗೆ ಪಾವತಿಸಬೇಕಾದ ಸಾಲ ಮತ್ತು ಜವಾಬ್ದಾರಿಗಳನ್ನು ತುರ್ತಾಗಿ ತೀರುವಳಿ ಮಾಡಬೇಕಾಗಿದ್ದು, ಸದರಿ ಸಾಲಗಳನ್ನು ಏಕಕಾಲಿಕ ತೀರುವಳಿ ಯೋಜನೆಯಡಿಯಲ್ಲಿ (OTS) ತೀರುವಳಿ ಮಾಡುವ ಸಂಬಂಧ ಬ್ಯಾಂಕುಗಳೊಂದಿಗೆ ಸಂಧಾನ ಸಭೆಯನ್ನು ನಡೆಸಲಾಗಿರುತ್ತದೆ. ಈ ಭಾಗದ ಕಬ್ಬು ಬೆಳೆಗಾರರ ರೈತರ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಬೇಕಾಗಿರುತ್ತದೆ. ಸದರಿ ಅಂಶಗಳ ಹಿನ್ನೆಲೆಯಲ್ಲಿ ಪರಿಶೀಲಿಸಿ, ಟೆಂಡರ್ ಡಾಕ್ಯೂಮೆಂಟ್‌ನಲ್ಲಿನ ಈ ಕೆಳಕಂಡ ಷರತ್ತುಗಳನ್ನು ಮಾರ್ಪಡಿಸಲು ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:12.10.2021ರಲ್ಲಿ ಅನುಮತಿ ನೀಡಲಾಗಿರುತ್ತದೆ.

1. ಬಿಡ್‌ದಾರರು ಒಂದು ಸಕ್ಕರೆ ಕಾರ್ಖಾನೆ / ಡಿಸ್ಟಿಲರಿ / ಸಹ-ವಿದ್ಯುತ್ ಘಟಕಗಳನ್ನು ನಡೆಸಿರುವ ಅನುಭವದ ಕುರಿತು ಅಗತ್ಯಪಡಿಸಿರುವ ಷರತ್ತನ್ನು ಕೈಬಿಡುವುದು.
2. ಹಿಂದಿನ 3 ವರ್ಷಗಳಲ್ಲಿ ಸರಾಸರಿ ರೂ.250.00 ಕೋಟಿಗಳಿಗಿಂತ ಕಡಿಮೆ ಇಲ್ಲದ ವಾರ್ಷಿಕ ವಹಿವಾಟು ನಡೆಸಿರುವುದನ್ನು ಅಗತ್ಯ ಪಡಿಸಿರುವ ಷರತ್ತನ್ನು ಕೈಬಿಡುವುದು.
3. ಹಿಂದಿನ 5 ವರ್ಷಗಳ ಲೆಕ್ಕಪರಿಶೋಧನಾ ಬ್ಯಾಲೆನ್ಸ್ ಶೀಟ್ ಮತ್ತು ವಾರ್ಷಿಕ ವರದಿಗಳನ್ನು ಪ್ರಸ್ತುತಪಡಿಸಲು ಅಗತ್ಯಪಡಿಸಿರುವ ಷರತ್ತುಗಳನ್ನು ಕೈಬಿಡುವುದು.

ನಂತರ ಟೆಂಡರ್ ವೇಳಾಪಟ್ಟಿಯಂತೆ ದಿನಾಂಕ 6.12.2021ರಂದು ತಾಂತ್ರಿಕ ಪರಿಶೀಲನಾ ಸಮಿತಿ ಸಭೆಯನ್ನು ನಡೆಸಲಾಯಿತು. ಸದರಿ ಸಭೆಯಲ್ಲಿ ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗಿ, ಇ-ಪ್ರಕ್ಯೂರ್‌ಮೆಂಟ್ ಮೂಲಕ ಮೆ॥ಗಿರಿಜಾರಮಣ ಇಂಪೆಕ್ಸ್ ಪ್ರೈ ಲಿ., ಬೆಂಗಳೂರು ಇವರು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಿ, ಬಿಡ್ಡು ಸಲ್ಲಿಸಿರುತ್ತಾರೆ. ಸದರಿ ಸಂಸ್ಥೆಯವರು ಸಲ್ಲಿಸಿರುವ ದಾಖಲೆಗಳು ಟೆಂಡರ್ ಡಾಕ್ಯುಮೆಂಟ್‌ನಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಪೂರೈಸಿರುವುದರಿಂದ ಸಂಸ್ಥೆಯ ಅರ್ಹತೆಯನ್ನು ಪರಿಗಣಿಸಿ, ಟೆಂಡರ್ ಅರ್ಜಿಯನ್ನು ಸ್ವೀಕರಿಸಲು ಹಾಗೂ ಆರ್ಥಿಕ ಬಿಡ್ಡನ್ನು ತೆರೆಯಲು ನಿರ್ಣಯಿಸಲಾಯಿತು.

ದಿನಾಂಕ:6.12.2021ರಂದು ಆರ್ಥಿಕ ಪರಿಶೀಲನಾ ಸಮಿತಿ ಸಭೆಯನ್ನು ನಡೆಸಲಾಗಿದೆ. ಆರ್ಥಿಕ ಪರಿಶೀಲನಾ ಸಮಿತಿ ಸಭೆಯಲ್ಲಿ ಮೆ॥ಗಿರಿಜಾರಮಣ ಇಂಪೆಕ್ಸ್ ಲಿ., ಬೆಂಗಳೂರು, 40 ವರ್ಷಗಳ ಅವಧಿಗೆ ನಮೂದಿಸಿರುವ ಒಟ್ಟು ಗುತ್ತಿಗೆ ಮೊತ್ತ ರೂ.320.00 ಕೋಟಿಗಳಾಗಿರುತ್ತದೆ.ಬಿಡ್ಡುದಾರರು 2021-22ನೇ ಸಾಲಿನಲ್ಲಿ ರೂ.242.00 ಕೋಟಿಗಳ ಗುತ್ತಿಗೆ ಮೊತ್ತ / ಮುಂಗಡ ಹಣ ಪಾವತಿಸುವುದಾಗಿ ಹಾಗೂ 2022-2023ನೇ ಸಾಲಿನಿಂದ ಪ್ರತಿ ವರ್ಷ ರೂ.2.00 ಕೋಟಿಗಳಂತೆ ವಾರ್ಷಿಕ ಗುತ್ತಿಗೆ ಮೊತ್ತ ಪಾವತಿಸುವುದಾಗಿ ಬಿಡ್‌ನಲ್ಲಿ ನಮೂದಿಸಿರುತ್ತಾರೆ.

ಕಾರ್ಖಾನೆಯನ್ನು ಗುತ್ತಿಗೆ ನೀಡಿ ಆದೇಶ ಹೊರಡಿಸಿದ 21 ದಿನಗಳೊಳಗಾಗಿ ಗುತ್ತಿಗೆ ಮುಂಗಡ ಹಣ ರೂ.242.00 ಕೋಟಿಗಳನ್ನು ಪಾವತಿಸುವುದಾಗಿ ಮೆ॥ಗಿರಿಜಾರಮಣ ಇಂಪೆಕ್ಸ್ ಲಿ., ಬೆಂಗಳೂರು, ದಿನಾಂಕ:7.12.2021ರಂದು ಮುಚ್ಚಳಿಕೆ ಪ್ರಮಾಣ ಪತ್ರ ಮತ್ತು ಅಫಿಡವಿಟ್ ಅನ್ನು ಸಲ್ಲಿಸಿರುತ್ತಾರೆ.

ಮೆ॥ಗಿರಿಜಾರಮಣ ಇಂಪೆಕ್ಸ್ ಪ್ರೈ ಲಿ., ಬೆಂಗಳೂರು, ಇವರು ಪ್ರಸ್ತಾಪಿಸಿರುವ ಆರ್ಥಿಕ ಬಿಡ್ಡನ್ನು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ದಿನಾಂಕ:08.12.2021 ರಂದು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಪ್ರಸ್ತುತ ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿ ಇರುತ್ತದೆ.

---

ಸಿಐ 137 ಸಿಓಎಫ್ 2021

(ಶಂಕರ.ಬ ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು